## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1206/2015

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ವೆಂಕಟೇಶ ಮೂರ್ತಿ ಕೆ.ಐ | CW: 1 | PW: 4 |
| ತಂದೆಯ ಹೆಸರು | : | ಈರಪ್ಪ | | |
| ವಯಸ್ಸು | : | 46 | | |
| ವೃತ್ತಿ | : | ಮಾರ್ಕೆಟಿಂಗ್ ಸೇಲ್ಸ್‌ಮ್ಯಾನ್ | | |
| ವಾಸಸ್ಥಳ | : | ಸವಳಂಗ | | |

ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 2 ಮತ್ತು 3 ರವರು ಗೊತ್ತು. ಚಾಸಾ 4 ನನ್ನ ತಂಗಿ. ಚಾಸಾ 5 ನನ್ನ ತಾಯಿ ಅವರು ತೀರಿಕೊಂಡಿರುತ್ತಾರೆ. ಚಾಸಾ 6 ಮತ್ತು 7 ರವರು ನಮ್ಮ ಮಾವನ ಮಕ್ಕಳು. ಚಾಸಾ 8 ಮತ್ತು 9 ರವರು ನಮ್ಮ ಗ್ರಾಮಸ್ಥರು. ಚಾಸಾ 9 ರವರು 5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ.

ದಿಃ 18.04.2015 ರಂದು ನಾನು ದಾವಣಗೆರೆಯಲ್ಲಿ ಕೆಲಸದಲ್ಲಿದ್ದಾಗ ನನ್ನ ತಂಗಿ ಚಾಸಾ 4 ರವರು ನೇಣು ಹಾಕಿಕೊಂಡಿರುತ್ತಾರೆ ಎಂದು ನನಗೆ ದೂರವಾಣಿ ಕರೆ ಬಂದ ಮೇರೆಗೆ ನಾನು ಸವಳಂಗದ ನಮ್ಮ ಮನೆಗೆ ಹೋದಾಗ ನ್ನ ತಮ್ಮ ನರೇಂದ್ರ ಹಾಗೂ ಚಾಸಾ 5 ರವರು ನನ್ನ ತಂಗಿಯನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು. ಸದರಿ ವಿಚಾರ ತಿಳಿದುಕೊಂಡು ನಾನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ 4 ರವರಿಗೆ

ಪ್ರಥಮ ಚಿಕಿತ್ಸೆ ನೀಡಿದ್ದು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ವೈದ್ಯರು ಹೇಳಿದ ಮೇರೆಗೆ ನಾವು ಚಾಸಾ 4 ರವರನ್ನು ಉಡುಪಿಯ ಮಣಿಪಾಲ್ ಆಸ್ಪತ್ರೆಗೆ ಕರೆದು ಕೊಂಡು ಹೋಗಿ ದಾಖಲಿಸಿರುತ್ತೇವೆ. 15-20 ದಿನ ಚಿಕಿತ್ಸೆ ಪಡೆದುಕೊಂಡ ನಂತರ ಚಾಸಾ 4 ರವರನ್ನು ಆಸ್ಪತ್ರೆಯವರು ಡಿಸ್ಚಾರ್ಜ್ ಮಾಡಿದ ಮೇರೆಗೆ ನಾನು ಚಾಸಾ 4 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೇನೆ.

ದಿಃ 23.07.2015 ರಂದು 1 ನೇ ಆರೋಪಿಯು ನಮ್ಮ ಮನೆಯ ಹತ್ತಿರ ಗಲಾಟೆ ಮಾಡುವ ಪ್ರಯತ್ನ ಮಾಡಿರುತ್ತಾರೆ. ಆಗ ಯಾರಾದರೂ ಹಿರಿಯರನ್ನು ಕರೆದುಕೊಂಡು ಬನ್ನಿ ಎಂದು ಚಾಸಾ 5 ರವರು 1 ನೇ ಆರೋಪಿಗೆ ಹೇಳಿ ಕಳುಹಿಸಿರುತ್ತಾರೆ. ದಿಃ 27.07.2015 ರಂದು 1 ನೇ ಆರೋಪಿಯು ಮಂಜಪ್ಪ ಮತ್ತು ಉಜ್ಜಪ್ಪ ಎಂಬ ವ್ಯಕ್ತಿಗಳನ್ನು ನಮ್ಮ ಮನೆಗೆ ಕಳುಹಿಸಿರುತ್ತಾನೆ. ಸದರಿ ವ್ಯಕ್ತಿಗಳು ನಮ್ಮ ಮನೆಗೆ ಬಂದು ಗಲಾಟೆ ವಿಚಾರ ಕೇಳಿ ರಾಜೀ ಸಂಧಾನ ಮಾಡಿಸಿರುತ್ತೇವೆ ಎಂದು ನನ್ನನ್ನು, ಚಾಸಾ 4 ರಿಂದ 7 ರವರನ್ನು ಸವಳಂಗದ ಮಿಕ್ಕಿದ ಮಾರಿಕಾಂಬ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಆಗ ಸಂಜೆ 4.30 ಗಂಟೆ ಆಗಿರುತ್ತದೆ. ಅಲ್ಲಿಗೆ ಹೋಗಿ ನೋಡಲಾಗಿ ಆರೋಪಿಗಳೆಲ್ಲರೂ ಇದ್ದರು.

8 ನೇ ಆರೋಪಿಯು ಏನು ಗಲಾಟೆ ಎಂದು ಚಾಸಾ 4 ರವರನ್ನು ಕೇಳಲಾಗಿ, 1 ನೇ ಆರೋಪಿಯು ನನ್ನ ತಲೆಗೆ ಹೊಡೆದಿರುತ್ತಾರೆ ನನಗೆ ಎಚ್ಚರ ಬಂದಾಗ ನಾನು ಮಣಿಪಾಲ್ ಆಸ್ಪತ್ರೆಯಲ್ಲಿದ್ದೆ ಎಂದು ಚಾಸಾ 4 ರವರು ಹೇಳಿದರು. 8 ನೇ ಆರೋಪಿಯು ಸದರಿ ಪ್ರಶ್ನೆಯನ್ನು ಎಷ್ಟು ಸಲ ಕೇಳಿದರೂ ಚಾಸಾ 4 ರವರು ಮೇಲೆ ಹೇಳಿದ ವಿಚಾರವನ್ನೇ ಹೇಳಿರುತ್ತಾರೆ. 1 ನೇ ಆರೋಪಿ ತಪ್ಪು ಮಾಡಿದ್ದಾನೆ ಎಂದು ಚಾಸಾ 7 ರವರು 8 ನೇ ಆರೋಪಿಯನ್ನು ಕೇಳಿದಾಗ, 8 ನೇ ಆರೋಪಿಯು ರೊಚ್ಚಿಗೆದ್ದು ಗಲಾಟೆ ಶುರುಮಾಡಿದನು. ಆರೋಪಿಗಳು ನಮ್ಮ ಮೇಲೆ ಗಲಾಟೆ ಮಾಡಿ 11 ನೇ ಆರೋಪಿಯು ಕಲ್ಲಿನಿಂದ ಚಾಸಾ 7 ರವರ ಮುಖಕ್ಕೆ ಹೊಡೆದು ಗಾಯಗೊಳಿಸಿರುತ್ತಾರೆ. ಪಂಚಾಯತಿಯ ವಿಚಾರವನ್ನು ನಾನು ಪೊಲೀಸರಿಗೆ ಮೊದಲೇ ತಿಳಿಸಿದ್ದರಿಂದ ಗಲಾಟೆಯ ಸಮಯದಲ್ಲಿ ಪೋಲೀಸರು ಬಂದು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡರು. ಹಲ್ಲೆಯಿಂದ ಗಾಯಗೊಂಡ ಚಾಸಾ 7 ರವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿ ನಾನು ನ್ಯಾಮತಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಹಾಗೂ ಪೋಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, ಉಳಿದ ಆರೋಪಿಗಳು ಗೈರು ಹಾಜರಿದ್ದು , ಉಳಿದ ಆರೋಪಿಗಳ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ದೂರನ್ನು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಕೈಹಿಡಿ ಗಾತ್ರದ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ನನ್ನ ತಂಗಿ ಚಾಸಾ 4 ರವರನ್ನು 1 ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಮದುವೆಯಾದ 2 ವರ್ಷಗಳ ತನಕ 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ತಾಯಿ ಗೌರಮ್ಮ ಚಾಸಾ 1 ರವರನ್ನು ಚೆನ್ನಾಗಿ ನೋಡಿಕೊಂಡು ನಂತರ ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆ ಮಾಡಿ ಕಿರುಕುಳ ಕೊಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ 7 ರವರ ಎದೆಗೆ, ಕುತ್ತಿಗೆಗೆ ಹೊಡೆದು ಗಾಯಗೊಳಿಸಿರುತ್ತಾರೆ ಎಂದರೆ ಸರಿ. ಆರೋಪಿಗಳೆಲ್ಲರೂ ನನಗೂ, ಚಾಸಾ 4 ರಿಂದ 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿಗಳೆಲ್ಲರೂ ನನಗೂ, ಚಾಸಾ 4 ರಿಂದ 6 ರವರಿಗೆ ಕೈಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಗಲಾಟೆ ಸಮಯದಲ್ಲಿ ಚಾಸಾ 8 ಮತ್ತು 9 ರವರು ಹಾಜರಿದ್ದರು ಎಂದರೆ ಸರಿ. ಮಂಜಪ್ಪ, ಉಜ್ಜಪ್ಪ, ಚಾಸಾ 8 ಮತ್ತು 9 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.

ದಿಃ 28.07.2015 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆ್ಗ ಚಾಸಾ 2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 1.45 ರಿಂದ 2.30 ರವರೆಗೆ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ 3 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿ.

ಪಂಚನಾಮೆ ಸಂದರ್ಭ ಮು.ಮಾ 1 ಮತ್ತು ದೊಣ್ಣೆಯನ್ನು ಪೊಲೀಸರು ವಶ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 2 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 2 ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ರ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಜಿ ವಕೀಲರಿಂದಃ-

ಚಾಸಾ 4 ಮತ್ತು ಆರೋಪಿ ನಡುವೆ ಮದುವೆ ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿ 2008 ರಲ್ಲಿ ಮದುವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ 4 ರವರಿಗೆ ಮಕ್ಕಳು ಇದ್ದರಾ ಎಂದರೆ ಇಬ್ಬರು ಗಂಡು ಮಕ್ಕಳು ಎಂದು ನುಡಿಯುತ್ತಾರೆ. ಚಾಸಾ 4 ರವರ ಮಕ್ಕಳು ಎಲ್ಲಿದ್ದಾರೆ ಎಂದರೆ 1 ನೇ ಆರೋಪಿಯ ಜೊತೆಯಲ್ಲಿ ಎಂದು ನುಡಿಯುತ್ತಾರೆ. ಮಕ್ಕಳಿಗೆ ಎಷ್ಟು ವಯಸ್ಸಿದ್ದಾಗ ಆರೋಪಿಯು ಅವರನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸಾಕ್ಷಿಯು 2017-18 ರ ಸಾಲಿನಿಂದ 1 ನೇ ಆರೋಪಿಯು ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಮಕ್ಕಳು ಈಗ ಏನು ಮಾಡುತ್ತಿದ್ದಾರೆ ಎಂದರೆ ಮೊದಲನೇ ಮಗ ಪ್ರಥಮ ಪಿಯುಸಿ, ಎರಡನೇ ಮಗ ಎಸ್ ಎಸ್ ಎಲ್ ಸಿ ಎಂದು ನುಡಿಯುತ್ತಾರೆ. 1 ನೇ ತರಗತಿಯಿಂದಲೂ ಎರಡೂ ಮಕ್ಕಳನ್ನು 1 ನೇ ಆರೋಪಿಯೇ ಓದಿಸುತ್ತಿದ್ದಾನೆ ಎಂದರೆ ಸರಿ.

ನನ್ನ ತಂಗಿಗೆ ಮಾನಸಿಕ ಖಾಯಿಲೆ ಇದೆ ಎಂದರೆ ಸಾಕ್ಷಿಯು ಮದುವೆಯಾದ ನಂತರ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂಗಿ ಚಾಸಾ 4 ರವರು ಒಬ್ಬರೇ ಇದ್ದಾಗ ಸಿಕ್ಕ ಸಿಕ್ಕ ಮಾತ್ರೆ ನುಂಗುವುದು, ಕೈ ಕೊಯ್ದುಕೊಳ್ಳುವುದು ಮತ್ತು ಆತ್ಮಹತ್ಯೆಗೆ ಪ್ರಯತ್ನಿಸುವುದು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸದರಿ ವಿಚಾರಗಳನ್ನು 1 ನೇ ಆರೋಪಿಯು ನಮಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 4 ರವರು 1 ನೇ ಆರೋಪಿಗೆ ಹೇಳದೆ ಕೇಳದೆ ನಮ್ಮ ಮನೆಗೆ ಬಂದು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಸುಮಾರು ಸಲ ರಾಜೀಸಂಧಾನ ಮಾಡಿದ್ದರೂ ಸಹ ನಾವು ಚಾಸಾ 4 ರವರನ್ನು 1 ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಚಾಸಾ 4 ರವರಿಗೆ ಮಾನಸಿಕ ಖಾಯಿಲೆ ಇರುವುದರಿಂದ ಅವರ ಮಕ್ಕಳನ್ನು 1 ನೇ ಆರೋಪಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ.

ದಿಃ 18.04.2015 ರಂದು ಚಾಸಾ 4 ರವರು ನೇಣು ಹಾಕಿಕೊಂಡಿರುತ್ತಾರೆ ಎಂದ ಸಮಯದಲ್ಲಿ ಚಾಸಾ 4 ರವರಿಗೆ ಮಾನಸಿಕ ಖಾಯಿಲೆ ಇದ್ದಿದ್ದರಿಂದ ನಾವು ಯಾವುದೇ ದೂರು ನೀಡಿಲ್ಲ ಎಂದರೆ ಸರಿ. ಚಾಸಾ 4 ರವರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ 1 ನೇ ಆರೋಪಿಯು ಅವರ ಚಿಕಿತ್ಸೆ 3 ಲಕ್ಷ ರೂ.ಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು 60,000/- ರೂ ಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಯಾವ ದಿನಾಂಕದಂದು ನಮ್ಮ ಮನೆಗೆ ಬಂದು ಗಲಾಟೆ ಮಾಡಿರುತ್ತಾನೆ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

ರಾಜೀ ಪಂಚಾಯತಿಗೆಂದು ಮಾರಿಕಾಂಬ ದೇವಸ್ಥಾನದ ಹತ್ತಿರ ಹೋದಾಗ ಸುಮಾರು ಎಷ್ಟು ಜನ ಇದ್ದರು ಎಂದರೆ ಗೊತ್ತಿಲ್ಲ. ಸದರಿ ದಿನಾಂಕದಂದು ರಾಜೀ ಪಂಚಾಯತಿ ಯಾವ ಸಮ ಯದಿಂದ ಯಾವ ಸಮಯದ ತನಕ ನಡೆಯಿತು ಎಂದರೆ ಸಂಜೆ 4.30 ರಿಂದ 5.30 ಎಂದು ನುಡಿಯುತ್ತಾರೆ. ಸದರಿ ಪಂಚಾಯತಿಯಲ್ಲಿ ನಾನು, ಚಾಸಾ 6 ಮತ್ತು 7 ರವರು ವಿನಾ ಕಾರಣ ಜೋರಾಗಿ ಮಾತಾಡಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 11 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 7 ರವರ ಮುಖಕ್ಕೆ ಹೊಡೆದು ಗಾಯಗೊಳಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಗಲಾಟೆ ಮಾಡಿಸುವ ಉದ್ದೇಶದಿಂದಲೇ ಪಂಚಾಯತಿಗೆ ಹೋಗುವ ಮುನ್ನ ಪೋಲೀಸರಿಗೆ ಹೇಳಿ ಹೋಗಿದ್ದೆ ಎಂದರೆ ಸರಿಯಲ್ಲ. ಪೋಲೀಸರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಹೇಳಲಾದ ಸಮಯದಲ್ಲಿ ನಾನು ಆರೋಪಿಗಳ ವಿರುದ್ಧ ಯಾವುದೇ ದೂರು ನೀಡಿರಲಿಲ್ಲ ಎಂದರೆ ಸರಿ. 7 ನೇ ಆರೋಪಿಯು ಆಯಾತಪ್ಪಿ ಬಿದ್ದು ಮಾಡಿಕೊಂಡ ಗಾಯಗಳ ಆಧಾರದ ಮೇರೆಗೆ ನಾನು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ತಾಯಿ ಚಾಸಾ 4 ರವರ ಮೇಲೆ ಗಲಾಟೆ ಮಾಡಿ ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 7 ರವರಿಗೆ ಮು.ಮಾ 2 ರಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಂಜಪ್ಪ, ಉಜ್ಜಪ್ಪ, ಚಾಸಾ 8 ಮತ್ತು 9 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು

ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ , ಮು.ಮಾ 1 ಮತ್ತು 2 ನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 4 ದೂರಿಗೆ ಯಾರು ಹೇಳಿ ಬರೆಸಿರುತ್ತಾರೆ ಎಂದರೆ ನಾನೇ. ಆರೊಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.